ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 22/09/2019

## 15 ಅಸೆಂಬ್ಲಿ ಕ್ಷೇತ್ರಗಳ ಮತದಾನಕ್ಕೆ ಮುಹೂರ್ತ ಫಿಕ್ಸ್

# ಅ.21ಕ್ಕೆ ಬೈಎಲೆಕ್ಷನ್

22-9-19

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಅನರ್ಹ ಶಾಸಕರ ರಾಜಕೀಯ ಅಳಿವು-ಉಳಿವಿನ ಹಣೆಬರಹ ಬರೆಯುವ ಜತೆಯಲ್ಲೇ ಬಿಜೆಪಿ ಸರ್ಕಾರದ ಅಸ್ತಿತ್ವ ನಿರ್ಧರಿಸಲಿರುವ ರಾಜ್ಯದ 15 ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ. ಮಹಾರಾಷ್ಟ್ರ ಹಾಗೂ ಹರಿಯಾಣ ವಿಧಾನಸಭಾ ಕ್ಷೇತ್ರಗಳ ಚುನಾವಣೆ ಜತೆಯಲ್ಲೇ 18 ರಾಜ್ಯಗಳ 64 ವಿಧಾನಸಭೆ ಹಾಗೂ ಒಂದು ಲೋಕಸಭೆ ಕ್ಷೇತ್ರಕ್ಕೆ ಅ.21ರಂದು ಉಪಚುನಾವಣೆ ನಡೆಯಲಿದೆ. ಕರ್ನಾಟಕದ ಮೂರು ರಾಜಕೀಯ ಪಕ್ಷಗಳ ಪಾಲಿಗೆ ಈ ಉಪಸಮರ ಅಗ್ನಿಪರೀಕ್ಷೆ ಎಂದೇ ವಿಶ್ಲೇಷಿಸಲಾಗುತ್ತಿದೆ.

» **ಹರಿಯಾಣ, ಮಹಾರಾಷ್ಟ್ರ ವಿಧಾನಸಭೆಗೂ ಅಂದೇ ಮತದಾನ, 24ಕ್ಕೆ ರಿಸಲ್ಟ್**

ದೋಸ್ತಿ ಪಕ್ಷಗಳಿಂದ ಅನರ್ಹಗೊಂಡ 17 ಶಾಸಕರು ರಾಜೀನಾಮೆ ನೀಡಿರುವ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಿಗೆ ಕೇಂದ್ರ ಚುನಾವಣಾ ಆಯೋಗ ಶನಿವಾರ ಉಪ ಚುನಾವಣೆ ದಿನಾಂಕ ಘೋಷಿಸಿದೆ. ಈ ಬೈಎಲೆಕ್ಷನ್ ಕೇವಲ ಅನರ್ಹರ ಭವಿಷ್ಯವನ್ನಷ್ಟೇ ನಿರ್ಧರಿಸದೆ 2 ತಿಂಗಳು ಪೂರೈಸಿರುವ ಬಿಜೆಪಿ ಸರ್ಕಾರದ ಅಳಿವು-ಉಳಿವು ಹಾಗೂ ಕಾಂಗ್ರೆಸ್, ಜೆಡಿಎಸ್‌ನ ಪ್ರತಿಷ್ಠೆಯನ್ನು ಒರೆಗೆ ಹಚ್ಚಲಿದೆ. ಹೈಕೋರ್ಟ್ ಮುಂದೆ ತಕರಾರು ಅರ್ಜಿ ಬಾಕಿ ಇರುವಂತಹ ಮಸ್ಕಿ ಹಾಗೂ ರಾಜರಾಜೇಶ್ವರಿ ನಗರ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಣೆಯಾಗಿಲ್ಲ.

**ಅನರ್ಹರಿಗೆ ಆತಂಕ:** ಸುಪ್ರೀಂ ಆದೇಶದ ನಿರೀಕ್ಷೆಯಲ್ಲಿದ್ದ ಅನರ್ಹರಿಗೆ ಉಪಚುನಾವಣೆ ಘೋಷಣೆ ಆಘಾತ ತಂದಿದೆ. ಆಯೋಗ ದಿನಾಂಕ ಪ್ರಕಟಿಸುತ್ತಿದ್ದಂತೆಯೇ ಸಿಎಂ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ ಕೆಲ ಅನರ್ಹರು ತಮ್ಮ ಭವಿಷ್ಯ ಹಾಳಾಯಿತೆಂದು ತರಾಟೆಗೆ ತೆಗೆದುಕೊಂಡರು. ಅಡ್ವೋಕೇಟ್ ಜನರಲ್ ಅವರನ್ನು ಕರೆಸಿಕೊಂಡು ಕಾನೂನು ಸಾಧ್ಯತೆಗಳ ಬಗ್ಗೆ ಸಮಾಲೋಚಿಸಿದ ಯಡಿಯೂರಪ್ಪ ಅನರ್ಹರನ್ನು ಸಮಾಧಾನಪಡಿಸಿ ನಿಮ್ಮನ್ನು ಕೈಬಿಡುವುದಿಲ್ಲವೆಂಬ ಭರವಸೆ ನೀಡಿದರು. ಸೋಮವಾರ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಿಗದಿಯಾಗಿರುವ ಹಿನ್ನೆಲೆಯಲ್ಲಿ ವಕೀಲರ ಜತೆ ಚರ್ಚೆ ನಡೆಸುವ ಸಲುವಾಗಿ ಅನರ್ಹರ ಜತೆ ದೆಹಲಿಗೆ ತೆರಳಿದರು. ● ವರದಿ ಪುಟ 7



### ಎಲ್ಲೆಲ್ಲಿ ಚುನಾವಣೆ?

- ಕಾಗವಾಡ
- ಗೋಕಾಕ್
- ಅಥಣಿ
- ಹೊಸಕೋಟೆ
- ಯಲ್ಲಾಪುರ
- ರಾಣೆಬೆನ್ನೂರು
- ಕೆ.ಆರ್ ಪುರಂ
- ಚಿಕ್ಕಬಳ್ಳಾಪುರ
- ಹಿರೇಕೆರೂರು
- ಹುಣಸೂರು
- ಮಹಾಲಕ್ಷ್ಮಿ ಲೇಔಟ್
- ಯಶವಂತಪುರ
- ಕೆ.ಆರ್.ಪೇಟೆ
- ಶಿವಾಜಿನಗರ
- ಹೊಸಪೇಟೆ

**2 ಕ್ಷೇತ್ರಕ್ಕೆ ತಡೆ**

- ಮಸ್ಕಿ
- ಆರ್‌ಆರ್ ನಗರ

### ವಿಧಾನಸಭೆ ಬಲಾಬಲ

| | |
|---|---|
| **225** ಒಟ್ಟು ಸ್ಥಾನ | **01** ಪಕ್ಷೇತರ |
| **104** ಬಿಜೆಪಿ | **01** ಸ್ಪೀಕರ್ |
| **66** ಕಾಂಗ್ರೆಸ್ | **01** ನಾಮ ನಿರ್ದೇಶಿತ |
| **34** ಜೆಡಿಎಸ್ | **17** ಖಾಲಿ ಸ್ಥಾನ |
| **01** ಬಿಎಸ್‌ಪಿ | |

### ಬೈಎಲೆಕ್ಷನ್ ಹಿನ್ನೆಲೆ

ದೋಸ್ತಿ ಸರ್ಕಾರದ ವಿರುದ್ಧ ಸಿಡಿದು ಬಂಡಾಯವೆದ್ದು ರಾಜೀನಾಮೆ ನೀಡಿದ್ದ ಕಾಂಗ್ರೆಸ್-ಜೆಡಿಎಸ್‌ನ 17 ಶಾಸಕರನ್ನು ಹಿಂದಿನ ಸ್ಪೀಕರ್ ರಮೇಶ್ ಕುಮಾರ್ ಅನರ್ಹಗೊಳಿಸಿದ್ದರು. ಅದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿರುವ ಪ್ರಕರಣ ಇತ್ಯರ್ಥವಾಗುವ ಮುನ್ನವೇ ಚುನಾವಣೆ ಘೋಷಣೆಯಾಗಿದೆ.

**ಸೆ.23** ನಾಮಪತ್ರ ಸಲ್ಲಿಕೆಗೆ ಅಧಿಸೂಚನೆ ಪ್ರಕಟ

**ಸೆ.30** ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ

**ಅ.1** ನಾಮಪತ್ರ ಪರಿಶೀಲನೆ

**ಅ.3** ನಾಮಪತ್ರ ಹಿಂಪಡೆಯಲು ಕೊನೆಯ ದಿನ

**ಅ. 21** ಮತದಾನ ದಿನ

**ಅ.24** ಮತ ಎಣಿಕೆ ದಿನ

### ಬಿಜೆಪಿಗೆ ಏಕೆ ಮುಖ್ಯ?

● ಬಿಜೆಪಿಯ ಅಸೆಂಬ್ಲಿ ಬಲ 105 ಇದೆ. ಸರ್ಕಾರ ಉಳಿಯಲು 113 ಮ್ಯಾಜಿಕ್ ನಂಬರ್ ದಾಟಬೇಕು ● 15 ಕ್ಷೇತ್ರಗಳ ಪೈಕಿ ಕನಿಷ್ಠ 8 ಕ್ಷೇತ್ರಗಳನ್ನಾದರೂ ಗೆದ್ದರಷ್ಟೇ ಮೂರೂವರೆ ವರ್ಷ ಸರ್ಕಾರ ಸೇಫ್ ● ನೂತನ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್ ನೇತೃತ್ವದ ಮೊದಲ ಚುನಾವಣೆ

### ಕೈಗೇಕೆ ಪ್ರತಿಷ್ಠೆ?

● ಉಪಸಮರ ನಡೆಯುತ್ತಿರುವ 15ರಲ್ಲಿ 12 ಕಾಂಗ್ರೆಸ್ ಕ್ಷೇತ್ರಗಳು ● ಲೋಕಸಭಾ ವೈಫಲ್ಯದಿಂದ ಪುಟಿದೇಳಲು ಇಲ್ಲಿ ಗೆಲ್ಲಲೇಬೇಕು ● ಪಕ್ಷವನ್ನು ಮತ್ತೆ ಹಿಡಿತಕ್ಕೆ ತೆಗೆದುಕೊಳ್ಳಲು ಸಿದ್ದರಾಮಯ್ಯಗೆ ಪ್ರತಿಷ್ಠೆ ಸವಾಲು

### ದಳಕ್ಕೆ ಅಸ್ತಿತ್ವ ಚಿಂತೆ

● ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಸರ್ಕಾರ ಬೀಳಿಸಿದ ಬಿಜೆಪಿಗೆ ಪಾಠ ಕಲಿಸುವುದು ● ಪಕ್ಷ ಬಿಟ್ಟು ಹೋದ ಶಾಸಕರ ರಾಜಕೀಯ ಭವಿಷ್ಯ ಇಲ್ಲದಂತೆ ಮಾಡುವುದು ● ನಾಯಕತ್ವದ ವಿರುದ್ಧ ದನಿ ಎತ್ತಿರುವ ಶಾಸಕರಿಗೆ ಎಚ್ಚರಿಕೆಯ ಸಂದೇಶ ನೀಡುವುದು

### ಅನರ್ಹರ ಸ್ಥಿತಿ ಏನು?

- ಚುನಾವಣೆಗೆ ತಡೆ ತರಲು ಸುಪ್ರೀಂನಲ್ಲಿ ಯತ್ನ
- ಸ್ಪೀಕರ್ ತೀರ್ಪು ಊರ್ಜಿತವಾದರೆ ಕುಟುಂಬದವರನ್ನು ಚುನಾವಣೆಗೆ ನಿಲ್ಲಿಸುವುದು
- ಶಾಸಕತ್ವ ಹೋದರೂ, ಚುನಾವಣೆಗೆ ಸ್ಪರ್ಧೆಗೆ ಕೋರ್ಟ್ ಅವಕಾಶ ಕೊಡಲಿ ಎಂದು ಆಶಿಸುವುದು

### ಸುಪ್ರೀಂನಲ್ಲಿ ಏನಾಗಬಹುದು



■ ಅನರ್ಹಗೊಳಿಸಿದ ಸ್ಪೀಕರ್ ಆದೇಶ ಎತ್ತಿ ಹಿಡಿಯಬಹುದು ■ ಸ್ಪೀಕರ್ ಆದೇಶಕ್ಕೆ ತಡೆ ನೀಡಬಹುದು ■ ಮತ್ತೆ ಸ್ಪೀಕರ್ ಅಂಗಳಕ್ಕೆ ಕಳುಹಿಸಬಹುದು ■ ಚುನಾವಣಾ ದಿನಾಂಕ ಘೋಷಣೆಗೆ ತಡೆ ನೀಡಬಹುದು

## ಮಹಾಸಮರ ಫಿಕ್ಸ್

**64 ಕ್ಷೇತ್ರಗಳಲ್ಲಿ ಉಪಚುನಾವಣೆ** ▶9